# ಜೋಕುಮಾರ ಸ್ವಾಮಿ: ಹೆಣ್ಣುತನದ ಸಾರ್ಥಕತೆಯ ನೀರಿಕ್ಷೆಯಲ್ಲಿ

**ಶಿವಾನಂದ ಹಂಚಿನಾಳ**

ಸಹ ಪ್ರಾಧ್ಯಪಕರು, ಕನ್ನಡ ವಿಭಾಗ, ನ್ಯೂ ಹೊರೈಜನ್ ಕಾಲೇಜು, ಕಸ್ತೂರಿನಗರ, ಬೆಂಗಳೂರು.

**Received: 10/12/2024 ; Accepted: 10/01/2025 ; Published: 02/02/2025**

**DOI: https://doi.org/10.5281/zenodo.14788766**

## ABSTRACT:

ಚಂದ್ರಶೇಖರ ಕಂಬಾರರು ನವ್ಯ ಸಾಹಿತ್ಯ ಸಂದರ್ಭದಲ್ಲಿ ಒಬ್ಬ ಮುಖ್ಯ ಕವಿಯಾಗಿ, ನಾಟಕಕಾರರಾಗಿ ಒಟ್ಟಿನಲ್ಲಿ ಬಹುಮುಖ ಪ್ರತಿಭೆಯಾಗಿ ಗುರುತಿಸಿಕೊಂಡವರು. ಕನ್ನಡಕ್ಕೆ 8ನೇ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಹಿರಿಮೆ ಇವರದು. ಸಿರಿಸಂಪಿಗೆ ನಾಟಕಕ್ಕೆ 1990ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಇವರು ಕರಿಮಾಯಿ, ಜಿಕೆ ಮಾಸ್ತರ್ ಅವರ ಪ್ರಣಯ ಪ್ರಸಂಗ, ಸಿಂಗಾರವ ಮತ್ತು ಅರಮನೆ ಮುಂತಾದ ಕಾದಂಬರಿಗಳನ್ನು ರಚಿಸಿದ್ದಾರೆ. ಚಾಳೇಶ್, ನಾಯಿಕತೆ, ಕಾಡು ಕುದುರೆ ಇದು ಚಲನಚಿತ್ರವಾಗಿ ಪ್ರಸಿದ್ಧಿ ಪಡೆದಿದೆ. ಜೋಕುಮಾರಸ್ವಾಮಿ ಇದು ಕಂಬಾರರ ಸಾಂಸ್ಕೃತಿಕ ಮುಖಮುಖಿಯಾಗಿಸುವ ಈ ಮಣ್ಣಿನ ಸೊಗಡನ್ನು ಚರ್ಚಿಸುವ ಮಹತ್ವದ ಕೃತಿಯಾಗಿದೆ. ಹೆಣ್ಣಿನ ಸಾರ್ಥಕತೆ ಅವಳ ಲೈಂಗಿಕ ಆಸೆ ಆಕಾಂಕ್ಷೆಗಳು ಈಡೇರಿಸುವಲ್ಲಿ ಸಾಂಪ್ರದಾಯಿಕ ಚೌಕಟ್ಟಿನ ಬಂಧಿಯಾಗುವುದು. ಪ್ರಾಕೃತಿಕವಾಗಿ ಸಾಂಪ್ರದಾಯಿಕ ಚೌಕಟ್ಟನ್ನು ದಾಟುವ ಪ್ರಕ್ರಿಯೆಯಲ್ಲಿ ಸಾಂಸ್ಕೃತಿಕ ಸಂವರ್ಷವನ್ನು ಕಾಣಬಹುದಾಗಿದೆ. ಕಂಬಾರರು ಪೌರಾಣಿಕ ಹಿನ್ನೆಲುಳ್ಳ ಜೋಕಮುನಿಯ ಮಗನೇ ಜೋಕುಮಾರಸ್ವಾಮಿಯ ಕತೆಯ ಆಶಯ ಈ ನಾಟಕದಲ್ಲಿ ಎದ್ದು ಕಾಣುತ್ತದೆ. ಉತ್ತರ ಕರ್ನಾಟಕದಲ್ಲಿ ವಿಶಿಷ್ಟ ಆಚರಣೆಯಲ್ಲಿರುವ ಈ ಪೌರಾಣಿಕ ಕಥೆಯು ವಿಶಿಷ್ಟತೆದಿಂದ ಕೂಡಿದೆ. ಏಳು ದಿನಗಳಲ್ಲಿ ಅವನ ಜನನ ಬಾಲ್ಯ ಯೌವನ ಸಾವು ಎಲ್ಲವೂ ಮುಗಿಯುತ್ತದೆ ಎನ್ನುವುದು ನಂಬಿಕೆ. ಇದರ ಆಚರಣೆಯನ್ನು ಜೋಕುಮಾರನ ಹಬ್ಬದಲ್ಲಿ ಕಾಣಬಹುದು. ಜೋಕುಮಾರ ಒಬ್ಬ ದೇವತೆಯ ಮಗ ಮಾರಿಯ ಮಗ ಅವನು ಅಲ್ಪಾಯುಷ್ಯವಾಗಿ ಏಳು ದಿನಗಳಲ್ಲಿ ಮೆರೆದು ಪುಂಡಾಡಿಕೆ ಮಾಡಿ ತೀರಿಹೋದವನು ಎಂದು ಹೇಳುತ್ತಾರೆ. ಅವನ ತಾಯಿಯು ದೇವತಸ್ತ್ರೀ ಆಗಿದ್ದರೂ ಅವನನ್ನು ಕಾಪಾಡದೆ ಹೋದಳೆಂದು ಪ್ರತೀತಿ. ಕ್ಷುದ್ರ ದೇವತೆಗಳಲ್ಲಿ ಜೋಕುಮಾರಸ್ವಾಮಿ ಒಬ್ಬ. ಇಂತಹ ಕಥೆಯನ್ನು ಕಂಬಾರರು ಸಮಕಾಲಿನ ಜೀವನಕ್ಕೆ ಹೆಣ್ಣು ಮತ್ತು ಭೂಮಿ ಮುಖಮುಖಿಯಾಗಿಸುವ ಸಾಮಾಜಿಕ ನ್ಯಾಯ ಪಥದಲ್ಲಿ ಮುನ್ನಡಿಸುವ ಧೋರಣೆಯ ಮಹತ್ವದ ಸಂಗತಿಯಾಗಿದೆ. ಕಂಬಾರರ 'ಜೋಕುಮಾರ ಸ್ವಾಮಿ' ನಾಟಕವನ್ನು; ಸಮಕಾಲೀನ ವಸ್ತುವಾದ ಉಳುವವನೇ ನೆಲದ ಒಡೆಯ ಎಂಬ ವಸ್ತುವನ್ನು ತೆಗೆದುಕೊಂಡು ಅದನ್ನು ಲೈಂಗಿಕ ಫಲವಂತಿಕೆಯೊಂದಿಗೆ ಹೊಂದಿಸಿ ಕಟ್ಟಲಾಗಿದೆ.

**KEYWORDS:**

ಹೆಣ್ಣುತನ, ಸಂವೇದನೆ, ಸ್ತ್ರೀ ಶೋಷಣೆ, ಜೋಕುಮಾರಸ್ವಾಮಿ, ಲೈಂಗಿಕತೆ.

ಸ್ತ್ರೀ ಸಂವೆದನೆ ಎಂದರೆ ಸ್ತ್ರೀ ಕುರಿತು ಕಾಳಜಿ ಅವಳ ನೋವುಗಳಿಗೆ ಸ್ಪಂಧಿಸುವ ಧೋರಣೆಯಾಗಿದೆ. 'ಸಂವೇದನೆ' ಎಂದರೆ ಇಂಗ್ಲೀಷಿನ ಸೆನ್ಸಿಬಿಲಿಟೀ ಪದಕ್ಕೆ ಸಮಾನಾವಾಗಿ ಕನ್ನಡ ಸಾಹಿತ್ಯ ಸಂದರ್ಭಗಳಲ್ಲಿ ಅಭಿವ್ಯಕ್ತಗೊಳ್ಳುತ ಬಂದಿದೆ. 'ಯಾವುದೇ ಅನುಭವಕ್ಕೆ ವ್ಯಕ್ತಿಯೊಬ್ಬನ ವಿಶಿಷ್ಟವಾದ ಭಾವನಾತ್ಮಕ ಮತ್ತು ಬೌದ್ಧಿಕ ಪ್ರಕ್ರಿಯೆ' ಎಂಬ ಅರ್ಥದಿಂದ ಅದೊಂದು ತಾತ್ವಿಕ ಪರಿಭಾಷೆಯಾಗಿ ಹೊಸ ಅರ್ಥವನ್ನು ಪಡೆದುಕೊಂಡರು ದಲಿತ ಸಂವೇದನೆ, ಮುಸ್ಲಿಂ ಸಂವೇದನೆ, ಸ್ತ್ರೀ ಸಂವೇದನೆ ಎನ್ನುವ ಸೈದ್ಧಾಂತಿಕತೆ ನೆಲೆಗಳಲ್ಲಿ ನೋಡಬಹುದಾಗಿದೆ.

'ಶತಮಾನಗಳಿಂದ ಗಂಡು ಹೆಣ್ಣು ಕೂಡಿ ಬದುಕಿದರು. ಆದರೆ ಅವರಿಬ್ಬರಿಗೂ ಪರಿಚಿತವಾದ ಒಂದು ಸಾಮಾನ್ಯ ಪ್ರಪಂಚವಿದ್ದಂತೆ ಹೆಣ್ಣಿಗೆ ಅವಳದೇ ಆದ ಭೌತಿಕ ಮಾನಸಿಕ ಪ್ರಪಂಚ ಉಳಿಯಿತು. ಈ ಹಿನ್ನಲೆಯಲ್ಲಿ ಮಹಿಳೆಯ ಸ್ಪಂದನೆಯ, ಗ್ರಹಿಕೆಯ ಸ್ವೀಕಾರದ ಲಯ, ಗತಿ, ತೀವ್ರತೆಗಳು ಭಿನ್ನವಾದವು. ಈ ಭಿನ್ನತೆ ಬದುಕನ್ನು ನೋಡುವ ಅವಳ ದೃಷ್ಟಿಕೋನಕ್ಕೆ ಒಂದು ವಿಶಿಷ್ಟತೆಯನ್ನು ತಂದುಕೊಟ್ಟಿದೆ'.

ಒಂದೇ ಕೌಟಂಬಿಕ, ಸಾಮಾಜಿಕ, ಪರಿಸರದಲ್ಲಿ ಬೆಳೆದ ಗಂಡು ಹೆಣ್ಣು ಮಕ್ಕಳಿಗೆ ಒದಗುವ ಸಂದರ್ಭ, ಸಿಗುವ ಒತ್ತಾಸೆ ಭರವಸೆಗಳು ದಕ್ಕುವ ಅನುಭವ ಅವಕಾಶಗಳು, ವಿಭಿನ್ನವಾಗಿರುತ್ತವೆ. ಹೀಗೆ ಭಿನ್ನವಾದ ಸಾಂಸ್ಕೃತಿಕ ಸಂದರ್ಭದಲ್ಲಿ ಬದುಕಬೇಕಾದ ಹೆಣ್ಣಿನ ಕನಸು ಬಯಕೆ ಮತ್ತು ಗ್ರಹಿಕೆಗಳು ಬೇರೆ ಬೇರೆಯಾಗಿರುತ್ತವೆ. ಹೀಗಾಗಿಯೇ ಜಗತ್ತನ್ನು ಕಾಣುವ ಅನುಭವಿಸುವ ಮತ್ತು ಅಭಿವ್ಯಕ್ತಿಸುವ ಪುರುಷ ಸಂವೇದನೆಯಲ್ಲಿ ಹೆಣ್ಣೊಬ್ಬಳ ಪರಿಗ್ರಹಿಕೆ ಹಾಗೂ ಅಬಿವ್ಯಕ್ತಿ ವಿನ್ಯಾಸಕ್ಕೂ ಅಂತರವಿರುತ್ತದೆ. ಕೆಲವು ಸಂದರ್ಭಗಳಲ್ಲಿ ಶಾರೀರಿಕ ಅನುಭವಗಳನ್ನು ಹೊರತುಪಡಿಸಿ ಮಾನಸಿಕ ಅನುಭಾವಗಳಲ್ಲಿ ಒಂದಾಗುವ ಸಾಧ್ಯತೆಗಳನ್ನು ಪುರುಷ ಸಂವೇದನೆಗಳಲ್ಲಿ ಕಂಡುಬರುತ್ತದೆ. ಸ್ತ್ರೀ ಸಂವೇದನಗೆ ಸಂಬಂಧಿಸಿದಂತೆ ಪುರುಷ ಆಲೋಚನೆಗಳನ್ನು ಕುರಿತು ಹೇಳವಂತಹದು.

ಸಂವೆದನೆಯನ್ನುವುದು ಯಾವುದು ಮತ್ತು ಯಾರನ್ನು ಗುರುತ್ತಿಸುವುದು ಎನ್ನುವುದು ಪ್ರಶ್ನೆಯಾಗಿದೆ. ಮಹಿಳಾ ಸಂವೇದನೆ ಎನ್ನುವುದು ಮಹಿಳೆಯರೆ ಬರೆದ ಪಠ್ಯಯೋ ಎನ್ನವುದು ಚರ್ಚಿತವಾದ ವಿಷಯವಾಗಿದೆ. ದಲಿತರ ನೋವುಗಳನ್ನು ಪಠ್ಯದ ರೂಪದಲ್ಲಿ ಹಿಡಿದಿಡಲು ನೋವುಂಡಿರ ಬೇಕೋ ಅಥವಾ ದಲಿತೇತರ ಬರಹಗಾರರಾಗಿರ ಬೇಕೊ ಎನ್ನುವುದು. ಆಗಾದರೆ ಪಂಪನ ಸಾಹಿತ್ಯವನು ಗ್ರಹಿಸಲು

ಜೈನರೆ ಸೂಕ್ತ ಎನ್ನುವುದು ಸಮಂಜಸವಲ್ಲ. ಹಾಗೆಯೇ ಮಹಿಳೆಯರ ವೇದನೆಗಳನ್ನು ಪುರುಷನು ಕೂಡ ಅರ್ಥ ಮಾಡಿಕೊಳ್ಳಬಹುದಾಗಿದೆ. ಎಷ್ಟೋ ಸಂದರ್ಭಗಳಲ್ಲಿ ಪುರುಷ ಬರವಣಿಗೆಯ ಮೂಲಕ ಮಹಿಳಾ ಸಂವೇದನೆ ಅಭಿವ್ಯಕ್ತಗೊಂಡಿವೆ.

ಪ್ರಸ್ತುತ ಚರ್ಚೆಗೇ ಆಯ್ದುಕೊಂಡ ವಿಷಯ ನವ್ಯ ಚಳುವಳಿಯ ಪ್ರಭಾವದಲ್ಲಿ ಬರುವ ಡಾ. ಚಂದ್ರಶೇಖರ ಕಂಬಾರರ ಜೋಕುಮಾರಸ್ವಾಮಿ ನಾಟಕದ ಗೌಡತಿ ಪಾತ್ರ. ಸ್ತೀ ಶೋಷಣೆಯ ಸಂಕೇತದಂತೆ ಕಂಡುಬರುವ ಗೌಡನ ಹೆಂಡತಿ ಬದುಕಿನ ಸಂತೃಪ್ತಿಯ ಅಭಾವದಿಂದ ಲೈಂಗಿಕ ಅತೃಪ್ತಿಯಿಂದ ಬಳಲುತ್ತಿರುತ್ತಾಳೆ. ಪುರುಷ ಪ್ರಧಾನವಾದ ಹಾಗೂ ಆ ಸಂಕೇತವನ್ನು ಹೊಂದಿದ್ದ ಗೌಡ ತನ್ನ ಸಂಗಾತಿಗೆ ಬೇಕು ಬೇಡಗಳನ್ನು ನೀಡುವಲ್ಲಿ ವಿಫಲನಾಗುತ್ತಾನೆ. ಆದರೆ ತನ್ನ ಜವಬ್ದಾರಿಯಿಂದ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಸಂಗಾತಿಯ ಸೂಕ್ಷ್ಮ ಸಂವದೇನೆಗಳನ್ನು ಪುರುಷ ಯಜಮಾನಕೆಯ ಧೋರಣೆಯಲ್ಲಿ ಅಲಕ್ಷೀಸುತ್ತಾ.

ನಾಟಕಕಾರರು ಅದ್ಬುತ ಪ್ರತಿಮೆ ಮೂಲಕ ಸ್ತೀ ಸಂವೇದನೆಯನ್ನು ಜೋಕುಮಾರಸ್ವಾಮಿಯ ಪೂಜೆಯ ಮೂಲಕ ಅಭಿವ್ಯಕ್ತಗೋಳಿಸುತ್ತಾರೆ. ಉತ್ತರ ಕರ್ನಾಟಕದಲ್ಲಿ ಇಂದಿಗೂ ಅಲ್ಲಲ್ಲಿ ಕಂಡು ಬರುವ ಇನ್ನು ಆಚರಣೆಯಲ್ಲಿ ಇರುವ ಈ ಪದ್ದತಿ ಒಂದು ಫಲವಂತಿಕೆಯ ಸಂಕೇತವಾಗಿದೆ. ಜೋಕುಮಾರ ಸ್ವಾಮಿಯನ್ನು ಪೂಜಿಸಿದರೆ ವಿಶೇಷವಾಗಿ ಸ್ತೀಯರಿಗೆ ಬೇಡಿದ ವರವನ್ನು ನೀಡುತ್ತಾನೆ. ಮಕ್ಕಳಿಲ್ಲದವರಿಗೇ ಸಂತಾನ ಭಾಗ್ಯವನ್ನು ನೀಡುತ್ತಾನೆ ಎನ್ನುವ ನಂಬಿಕೆಯಂತೆ ಕಥಾಹಂದರ ಹರಡಿದೆ. ನಾಟಕದಲ್ಲಿ ಮೇಲ್ನೋಟಕ್ಕೆ ಕಾಮಕೇಂದ್ರಿತದಂತೆ ಕಂಡುಬಂದರು ಇಲ್ಲಿ ಸ್ತ್ರೀ ಸಂವೇದನೆಯ ಹುಡುಕಾಟವಿದೆ. ನಾಟಕದ ನಾಯಕಿಯಾದ ಗೌಡತಿ ತನಗೆ ಸಂತಾನವಿಲ್ಲವೆಂದು ಫಲವಂತಿಕೆಯ ಸಂಕೇತವಾದ ಜೋಕುಮಾರ ಸ್ವಾಮಿಯ ಶಿಶ್ನವನ್ನು ಪೂಜಿಸುತ್ತಾಳೆ. ನಾಟಕದಲ್ಲಿ ಬರುವ ಗೌಡ ಒಂದಾರ್ಥದಲ್ಲಿ ತನ್ನ ಸಂಗಾತಿಯ ಲೈಂಗಿಕ ಬಯಕೆಯನ್ನು ಈಡೇರಿಸುವಲ್ಲಿ ವಿಫಲನಾಗುತ್ತಾನೆ. ಆದರೆ ಇನ್ನಿತರ ಹೆಣ್ಣುಗಳ ಸಹವಾಸದಲ್ಲಿ ಕಾಲಕಳೆಯುತ್ತಾನೆ. ಗಾದೆ ಮಾತಿನಂತೆ "ಗೌಡರ ಕೋಣದಂತೆ..." ತನ್ನ ಹೆಂಡತಿಗೂ ಸುಖವನ್ನು ನೀಡುವುದಿಲ್ಲ, ಅಸಹಾಯಕ ಹೆಣ್ಣು ಮಕ್ಕಳಿಗೂ ಗೌರವಿತವಾಗಿ ಬದುಕಲು ಬಿಡುವದಿಲ್ಲ (ನಿಂಗಿ, ಶಾರಿ, ಬಸಿ, ಶಿವಿ – ನಾಟಕದಲ್ಲಿ ಬರುವ ಶೋಷಿತ ಸ್ತ್ರೀ ಪಾತ್ರಗಳು). ಇದರಿಂದ ನಾಯಕಿ ತುಂಬಾ ವೇದನೆಯಿಂದ ಬದುಕುವಂತಾಗುತ್ತದೆ. ಯಾವಾಗ ಗಂಡನಿಂದ ತೃಪ್ತ ಜೀವನ ಸೀಗುವದಿಲ್ಲವೋ ಸಹಜವಾಗಿ ಗೌಡನ ಜೀತಗಾರನಾದ ಬಸಣ್ಣನ ಸಂಬಂಧವನ್ನು ಬಯಸುತ್ತಾಳೆ. ಜೀತಗಾರನ ಜಾತಿ ಅಂತಸ್ತು ಮುಖ್ಯವಾಗುವುದಿಲ್ಲ ಇಲ್ಲಿ ಗೌಡತಿಗೆ ನೆಮ್ಮದಿ ಬೇಕಾಗಿದೆ ಸಹಜ ಸೌಖ್ಯ ಬೇಕಾಗಿದೆ. ಸಮಾಜದಲ್ಲಿ ಅವಳಿಗೆ ಬಂಜೆತನದ ಪಟ್ಟವನ್ನು ಕಟ್ಟಲಾಗಿದೆ. ಅವಳದಲ್ಲದ ತಪ್ಪುಗಳನ್ನು ಪುರುಷನ

ದೌರ್ಭಲ್ಯಗಳನ್ನು ಹೆಣ್ಣಿನ ಮೇಲೆ ಹೇರಲಾಗಿದೆ. ಹೆಣ್ಣಿನ ಬೇಕು ಬೇಡುಗಳ, ಸೂಕ್ಷ್ಮಸಂವೇದನೆಗಳನ್ನು ಪುರುಷ ಅರ್ಥಮಾಡಿಕೊಳ್ಳವಲ್ಲಿ ವಿಪಲವಾಗಿದ್ದಾನೆ. ಗೌಡತಿ ತನ್ನ ಗಂಡನ ಹತ್ತಿರ ಎಷ್ಟೋ ಬಾರಿ ಕೇಳಿಕೊಳ್ಳುತ್ತಾಳೆ, ಮಗು ಬೇಕೆಂದು. ಆದರೆ ಗಂಡನಾದ ಗೌಡನು ಕೇಳಿಸಿಕೊಳ್ಳವುದೇ ಇಲ್ಲ. ಸಹಜವಾಗಿ ಗೌಡತಿ ಮನೆಯ ಆಳಾದ ಬಸಣ್ಣನ ಸ್ನೇಹವನ್ನು ಬೆಳೆಸುತ್ತಾಳೆ. ಇಲ್ಲಿ ಗೌಡತಿ ಜೋಕುಮಾರನನ್ನು ಬಸಣ್ಣನ ರೂಪದಲ್ಲಿ ಕಾಣುತ್ತಾಳೆ. ತನ್ನ ಬಯಕೆಯನ್ನು ಈಡೇರಿಸಿಕೊಳ್ಳತ್ತಾಳೆ. ಈ ತರಹದ ಮದುವೆಯಾಚೆಗಿನ ಲೈಂಗಿಕ ಸಂಬಂಧಗಳಲ್ಲಿ ಮತ್ತೊಂದು ಬಗೆಯಿದೆ ಉದಾ: ಚಂದ್ರಶೇಖರ ಕಂಬಾರರ ಕಾದಂಬರಿಯಲ್ಲಿ ಸಿಂಗಾರೆವ್ವ ಮತ್ತು ಅರಮನೆ ಹೊಲೆಯಾಳದ ಕರಿಯನ ಜತೆ ಇರಿಸಿಕೊಂಡಿರುವ ಸಂಬಂಧಗಳು. ಇವುಗಳು ಸಾಮಾಜಿಕ ವ್ಯವಸ್ಥೆಯಲ್ಲಿ ಅನೈತಿಕವಾಗಿ ಕಂಡು ಬಂದರು ವಾಸ್ತವಿಕ ನೆಲೆಯಲ್ಲಿ ಸಹಜವೆನಿಸುತ್ತವೆ. ಇಲ್ಲಿನ ನಾಯಕಿಗೆ ವಿರಹದ ಜೋತೆಗೆ ತಾಯ್ತನದ ಆಸೆಯೂ ಇದೆ. ಅದರೆ ಹೆಣ್ಣು ಲೈಂಗಿಕವಾಗಿ ಸ್ವಾತಂತ್ರ್ಯದೋರುವ ಯಾವುದೇ ಪ್ರಯತ್ನಗಳು ವೈಯಕ್ತಿಕವಲ್ಲ ಹಾಗೂ ಸುಲಭವು ಅಲ್ಲ. ಅವು ಸಾಮಾಜಿಕವಾದವು ಇಂತಹ ಸಂದರ್ಭಗಳಲ್ಲಿ ಪ್ರೇಮದ ಉತ್ಕಟತೆಯಲ್ಲಿ ಜಾತಿ ಸಂಸ್ಕೃತಿ ಗಡಿರೇಖೆಗಳನ್ನು ಮೀರಿ ಬರುವ ಗಂಡುಹೆಣ್ಣುಗಳ ಸಂಬಂಧಗಳನ್ನು ತಮ್ಮ ಸಾಹಿತ್ಯ ಸೃಷ್ಟಿಯ ಪ್ರಧಾನ ಆಶಯವಾಗಿಸಿಕೊಂಡವರೆಂದರೆ ಚಂದ್ರಶೇಖರ ಕಂಬಾರರು.

ನವ್ಯತೆಯ ಪ್ರಧಾನ ಲಕ್ಷಣಗಳಲ್ಲಿ ಒಂದಾದ ಜೀವನ ಪ್ರೀತಿ ಬದುಕಿನ ವಾಸ್ತವತೆಯಾಗಿದೆ. ಅಂತಹ ವಾಸ್ತವಿಕ ನೆಲೆಯಲ್ಲಿ ಬದುಕಿನ ಅಗತ್ಯತೆಯನ್ನು ಪ್ರತಿಪಾದಿಸುವಲ್ಲಿ. ಬಹುತೇಕ ನವ್ಯ ಸಾಹಿತ್ಯದಲ್ಲಿ ಹೆಣ್ಣು ಪ್ರಧಾನ ಪಾತ್ರ ವಹಿಸುತ್ತಾಳೆ. ನವ್ಯದಲ್ಲಿ ಸಾಹಿತಿಗಳು ಕೂಡ ಸ್ತ್ರೀ ಪ್ರಧಾನವಾದ ಸಾಹಿತ್ಯವನ್ನು ಸೃಷ್ಟಿಮಾಡಿದ್ದಾರೆ. ಶಾಂತಿನಾಥ ದೇಸಾಯಿ ಅವರ ಮುಕ್ತಿ ಕಾದಂಬರಿಯಲ್ಲಿ ಬರುವ 'ಡಾಲಿ' ಕಂಬಾರರ ಸಿಂಗಾರೆವ್ವ ಇನ್ನೂ ಮುಂತಾದವುಗಳು.

ಕಂಬಾರರು ಸಾಂಸ್ಕೃತಿಕ ಆಚರಣೇಯಾದ 'ಜೋಕುಮಾರ ಸ್ವಾಮಿ' ಪೂಜೆಯ ಮೂಲಕ ಸಾಮಾಜಿಕ ವಾಸ್ತವತೆಯನ್ನು ಮನುಷ್ಯ ಸಂಬಂಧಗಳ ಕುರಿತು ನಿರೂಪಿಸುತ್ತಾರೆ. ಸಾಂಸ್ಕೃತಿಕ ಅಚಾರ ವಿಚಾರಗಳಲ್ಲಿ ಅಡಗಿರುವ ಜೀವನದ ನಿಜಸಂಗತಿಗಳನ್ನು ನವಿರಾದ ನಿರೂಪಣೆಯಲ್ಲಿ ಓದುಗರಿಗೆ ತಲುಪಿಸುತ್ತಾರೆ. ಜೊಕುಮಾರ ಸ್ವಾಮಿಯ ಪೂಜೆಯಲ್ಲಿ ಸಾಂಸ್ಕೃತಿಕ ಅಂಶಗಳಿದ್ದರೆ. ಅದು ವಾಸ್ತವದಲ್ಲಿ ಹೆಣ್ಣಿನ ಕೊರತೆಯನ್ನು ನಿಗಿಸಬಲ್ಲ ಮನೋಧರ್ಮವಾಗಿದೆ. ಕಂಬಾರರ ನಾಟಕಗಳಲ್ಲಿ ಸಾಂಸ್ಕೃತಿಕ ಹಾಗೂ ವಾಸ್ತವಿಕ ವಿಚಾರಗಳು ಪರಸ್ಪರ ಮುಖಾಮುಖಿಯಾಗುವ ಮೂಲಕ ಸಮನ್ವಯಗೊಳ್ಳತ್ತವೆ. ಒಬ್ಬ ದೇಶಿಯ ಮನೋಧರ್ಮದ ಬರಹಗಾರ ತನ್ನ ನೆಲದ ಮೌಲ್ಯಗಳನ್ನು ಸಾರ್ವತ್ರಿಕಗೊಳಿಸುವ ಪರಿಯಾಗಿದೆ.

## ಪರಾಮರ್ಶನ ಗ್ರಂಥಗಳು:


1. ಚಂದ್ರಶೇಖರ ಕಂಬಾರ, (2009), ಜೋಕುಮಾರಸ್ವಾಮಿ, ಅಂಕಿತ ಪುಸ್ತಕ, ಬೆಂಗಳೂರು.
2. ನಾಗಭೂಷಣ ಸ್ವಾಮಿ ಓ.ಎಲ್., (1998), ವಿರ್ಶೆಯ ಪರಿಭಾಷೆ, ಅಭಿನವ ಪ್ರಕಾಶನ, ಬೆಂಗಳೂರು.
3. ಚಂದ್ರಶೇಖರ ಕಂಬಾರ, (2018), ಚಂದ್ರಶೇಖರ ಕಂಬಾರರ ಸಮಗ್ರ ಸಾಹಿತ್ಯ, ಸಪ್ನ ಬುಕ್ ಹೌಸ್, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.